ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ 1991ನೇ ಕರ್ನಾಟಕ ವೃತ್ತಿಗಳ, ಕಸಬುಗಳ, ಅಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

1991ನೇ ಸಾಲಿನ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷಣಿಯವರೇ, 1991ನೇ ಸಾಲಿನ ಕರ್ನಾಟಕ ಮಾರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷಣಿಯವರು : ಪ್ರಸ್ತಾವ ಏನೆಂದರೆ

1991 ನೇ ಸಾಲಿನ ಕರ್ನಾಟಕ ಮಾರಾಟತೆರಿಗೆ (ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಪರ್ಯಾಲೋಚನೆಗೆ ತೆಗೆದುಕೊಳ್ಳುವುದು.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ಉಪಾಧ್ಯಕ್ಷರೇ, ಇದೂ ಕೂಡಾ ನಮ್ಮ ಆಯವ್ಯಯಕ್ಕೆ ಪೂರಕವಾಗಿ ತಂದಂಥ ತಿದ್ದುಪಡಿಯಾಗಿದೆ. ಆದರೆ ಇದರ ಕ್ಲಾಸ್ (2) ಗೆ ಒಂದು ಅಮೆಂಡ್‌ಮೆಂಟ್ ತರುತ್ತಿದ್ದೇನೆ. ಅದನ್ನು ಮಾತ್ರ ಸೃಷ್ಟೀಕರಣ ಗೊಳಿಸಬೇಕೇ ಹೊರತು ಹೊಸದಾಗಿ ಏನು ಮಾಡತಕ್ಕದ್ದು ಇಲ್ಲ. ಕ್ಲಾಸ್ 2ಗೆ ಸರಕಾರದ ಪರವಾಗಿ ಈ ಕೆಳಕಂಡ ತಿದ್ದುಪಡಿಯನ್ನು ಪ್ರಪೋಸ್ ಮಾಡುತ್ತೇನೆ.

ಉಪಾಧ್ಯಕ್ಷಣಿಯವರು : ಮಾನ್ಯ ಮಂತ್ರಿಗಳು ಈಗ ಖಂಡ ಎರಡಕ್ಕೆ ತಿದ್ದುಪಡಿಯನ್ನು ಮಂಡಿಸಬೇಕು.

CLAUSE 2

In Clause 2 of the said Bill, after item (2), the following shall be inserted, namely :

"(3) in the provio to the clause (v), after the word and punctuation mark 'otherwise', the words 'other than the proceeds of the sale by a company relating to peper, cardamom or rubber grown within the State by such Company' shall be inserted".

ಇದೊಂದು ಅಮೆಂಡ್‌ಮೆಂಟ್ ಆಮೇಲೆ ಅನುನೋದನೆ ಮಾಡುತ್ತೇನೆ. ಇದಕ್ಕೆ ಸಭೆ ಮನ್ನಣೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷಣಿಯವರು : ತಿದ್ದುಪಡಿಯನ್ನು ಮಂಡಿಸಲಾಗಿದೆ. ಈಗ ತಿದ್ದುಪಡಿಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ನಿಮ್ಮ ಕಾಲದಲ್ಲಿ ಹೀಗೆ ಆಗುತ್ತಾ ಎಂದು ನಾನು ಎಣಿಸಿರಲಿಲ್ಲ, ಅನುಪೂರಕ ಬೇಡಿಕೆಗಳ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಸಿಗಲೇ ಇಲ್ಲ. ಅದನ್ನು ತಪ್ಪಿಸಿ ಈ ರೀತಿ ಮಾಡುತ್ತಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾತನಾಡುವುದನ್ನು ತಪ್ಪಿಸಬೇಕೆಂದು ಉದ್ದೇಶ ಇಲ್ಲ. ಎರಡು ನಿಮಿಷ ಅವಕಾಶ ಕೊಡಿ ನಾನು ಎಕ್ಸ್‌ಪ್ಲೈನ್ ಮಾಡುತ್ತೇನೆ. ಪೂರಕ ಬಜೆಟ್ ಮೇಲೆ ಮಾತನಾಡುವುದನ್ನು ತಪ್ಪಿಸಬೇಕೆಂದು ಉದ್ದೇಶ ಇಲ್ಲ. ಇದರ ಬಗ್ಗೆ ಚರ್ಚೆ ಪ್ರಾರಂಭ ಆಗುವ ಕಾಲದಲ್ಲೇ ನಾನು ಇಲ್ಲಿ ಎದ್ದುನಿಂತು ಎರಡನ್ನೂ ಮೂವ್ ಮಾಡಿದೆ. ಎರಡನ್ನೂ ಮೂವ್ ಮಾಡುವಾಗ ಎರಡರ ಬಗ್ಗೆ ಚರ್ಚೆ ಪ್ರಾರಂಭ ಮಾಡಲು ನಾನು ಪ್ರಸ್ತಾಪ ಮಾಡಿದ್ದೇನೆ. ಇದರ ಬಗ್ಗೆ ಪ್ರಸ್ತಾಪ ಮಾಡುವಾಗಲೇ ಹೇಳಿದ್ದೇನೆ. ಆಯವ್ಯಯವನ್ನು ಚರ್ಚೆ ಮಾಡುವುದರ ಜೊತೆಯಲ್ಲೇ ಪೂರಕ ಆಯವ್ಯಯದ ಬಗ್ಗೆ ಕೂಡಾ ಚರ್ಚೆಗೆ ಇದನ್ನು ಒಡ್ಡಿದ್ದೇವೆ. ಇದನ್ನೂ ಜೊತೆಯಲ್ಲೇ ಚರ್ಚೆ ಮಾಡಬೇಕೆಂದು ನಾನು ವಿನಂತಿ ಮಾಡಿಕೊಂಡಿದ್ದೇನೆ. ಅದಕ್ಕೆ ಸದನ ಒಪ್ಪಿದೆ. ತಾವು ಕೂಡಾ ಒಪ್ಪಿಕೊಂಡಿದ್ದೀರಿ. ಪ್ರೊಸೀಡಿಂಗ್ಸ್‌ನಲ್ಲಿ ನನ್ನ ಮಾತು ಬಂದಿದೆ. ಒಪ್ಪಿಗೆ ಕೊಟ್ಟಿದ್ದರೂ ಕೂಡಾ ಈ ರೀತಿ ವಾದ ಬಂದಿದೆ. ಪರಸ್ಪರ ಈ ತರಹ ಚರ್ಚೆ ಮಾಡುವ ಬದಲು ಮಾನ್ಯ ಉಪಾಧ್ಯಕ್ಷರೇ ತಾವು ದಯವಿಟ್ಟು ತಮ್ಮ ಚೇಂಬರ್‌ಗೆ ಕರಿಸಿ ನಮ್ಮದೇನಾದರೂ ತಪ್ಪಿದ್ದರೆ ಹೇಳಿ. We are prepared to take it.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ವೀರಪ್ಪ ಮೊಯಿಲಿಯವರು ಹೇಳಿದ್ದು ಒಪ್ಪುತ್ತೇನೆ. ತಾವು ಯಾವಾಗ ಪ್ರಸ್ತಾಪ ಮಾಡಿದಿರಿ? ಸಾಮಾನ್ಯ ಚರ್ಚೆ ಆಗಲೇ ಪ್ರಾರಂಭವಾಗಿತ್ತು, ಹಲವಾರು ಜನ ಚರ್ಚೆ ಪೂರೈಸಿದ್ದರು. ನಾನು ಅದಕ್ಕಾಗಿ ಹೇಳುತ್ತಿದ್ದೇನೆ. ನಾನು ಹೇಳುವುದರಲ್ಲಿ ತಪ್ಪಿದ್ದರೆ ಕ್ಷಮಾಪಣೆ ಕೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಕ್ಷಮಾಪಣೆ ಬೇಕಾಗಿಲ್ಲ. ನಾನು ಕೇಳುತ್ತೇನೆ. If I am wrong, I am prepared to apologise, It is borne out by records. I don't know why your Office is not supplying the Proceedings. I have been requesting your Office to supply the proceedings. I have to clarify.

ಉಪಾಧ್ಯಕ್ಷರು : ನೋಡೋಣ.

ಶ್ರೀ ಎಚ್. ಏಕಾಂತಯ್ಯ : ಸದನದಲ್ಲಿ ಚರ್ಚೆ ಪ್ರಾರಂಭವಾದ ಮೇಲೆ ಅವರು ಇದನ್ನು ಮಂಡಿಸಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಬೆಳಿಗ್ಗೆಯಿಂದ ಇದು ನಡೆಯುತ್ತಿದೆ. ತಾವು ಪ್ರೊಸೀಡಿಂಗ್ಸ್ ತರಿಸಿ. That may be correct. I am reading the Proceedings dt. 18-3-90. On that day, I moved both the Appropriation Bill & also the Appropriation Bills for supplementary estimates.

ಉಪಾಧ್ಯಕ್ಷರು : ಏಕಾಂತಯ್ಯನವರೇ ನಾನು ಪ್ರೊಸೀಡಿಂಗ್ಸ್ ತರಿಸುತ್ತೇನೆ

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಉಪಾಧ್ಯಕ್ಷರೇ, ಎಲ್ಲಾ ವಿಚಾರಗಳ ಮೇಲೆ ಚರ್ಚೆ ಏತಕ್ಕೆ ಮಾಡಬೇಕೆನ್ನುವ ಉದ್ದೇಶ ತಮಗೆ ಗೊತ್ತಿದೆ. ಆ ವಿಷಯಗಳ ಬಗ್ಗೆ ಚರ್ಚೆ ನಡೆಯುವುದು ಬೇಡ ನಿಮಗೆ ಕಾಳಜಿ ಇಲ್ಲದಿದ್ದರೆ ನಮ್ಮದೇನೂ ತಕರಾರು ಇಲ್ಲ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ

In clause-2 of said bill, after item(2) the following shall be inserted.

"(3) in the proviso to claulse (v) after the word and punctuation mark 'otherwise' the words 'otherthen the proceeds of the state 'by a company relating to pepper, Cardamom or rubber grown within the State by such company'shall be inserted".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ–2, ತಿದ್ದುಪಡಿಯಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ–1 ಇತ್ಯಾದಿ

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಭಾಗವಾಗಿರುತ್ತವೆ.

ಪ್ರಸ್ತಾವ ಅಂಗೀಕರಿಸಲಾಯಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಹೆಸರು ಮತ್ತು ಅವತರಣಿಕೆಗಳು ವಿಧೇಯಕಕ್ಕೆ ಸೇರಿಸಲ್ಪಟ್ಟವು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಉಪಾಧ್ಯಕ್ಷರೇ 1991ನೇ ಸಾಲಿನ ಕರ್ನಾಟಕ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯೊಂದಿಗೆ ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ 1991ನೇ ಸಾಲಿನ ಕರ್ನಾಟಕ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯೊಂದಿಗೆ ಅಂಗೀಕರಿಸುವುದು.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಉಪಾಧ್ಯಕ್ಷರೇ ಬೆಳಿಗ್ಗೆಯಿಂದ ನಾನು ಸೃಷ್ಟೀಕರಣ ಕೊಡಬೇಕೆಂದು ಇದ್ದೆ. ಆ ದಿನ ವಿರೋಧಪಕ್ಷದವರು ಹೊರಗಡೆ ಹೋಗಿದ್ದರು.

ಶ್ರೀ ಹೆಚ್. ಏಕಾಂತಯ್ಯ : ನಮಗೂ ಸ್ವಲ್ಪ ಅವಕಾಶ ಕೊಡಿ. ನಾವು ಯಾರು ಇಲ್ಲಿ ಇಲ್ಲದೇ ಇದ್ದಾಗ ಅದನ್ನು ಇಟ್ಟಿದ್ದೀರಿ. ನಾವು ಇಲ್ಲಿರುವ ಎಲ್ಲಾ ವಿರೋಧ ಪಕ್ಷದ ಸದಸ್ಯರು ಹೊರಗೆ ಹೋಗಿದ್ದೆವು....

Sri M.Veerappa Moily : Yes that may be correct, ಅಧ್ಯಕ್ಷಿಣೀಯವರೇ ನಾನು 18.3.91ರ ನಡವಳಿಕೆಯಲ್ಲಿರತಕ್ಕದ್ದನ್ನು ಓದುತ್ತಿದ್ದೇನೆ.

5.20 ಪಿ.ಎಂ.

ಜನರಲ್ ಆಗಿ ಮೂವ್ ಮಾಡಿದ ದಿವಸವೇ ನಾನು ಹೇಳಿದ್ದೇನೆ. ಅದು ಈ ರೀತಿಯಾಗಿದೆ "ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ '1990-91ನೇ ಸಾಲಿಗೆ ಸಂಬಂಧಿಸಿದ ಅನುಪೂರಕ ಅಂದಾಜುಗಳ (ಎರಡನೇ ಕಂತು) ಬಗ್ಗೆ ಪ್ರಸ್ತಾವಗಳನ್ನು ಸಭೆಗೆ ಮಂಡಿಸುತ್ತಿದ್ದೇನೆ, ಈಗ ಮಾನ್ಯ ಅಧ್ಯಕ್ಷರೇ ಇದನ್ನು ಆಯವ್ಯಯದ ಸಾಮಾನ್ಯ ಚರ್ಚೆಯ ಜೊತೆಯಲ್ಲಿಯೇ ತೆಗೆದುಕೊಳ್ಳಬೇಕೆಂದು ಸೂಚನೆ ಮಾಡುತ್ತೇನೆ" ಎಂದು ನಡವಳಿಕೆಯಲ್ಲಿ ಇದೆ.

ಶ್ರೀ ಹೆಚ್. ಏಕಾಂತಯ್ಯ: ನಾನು ಒಪ್ಪುತ್ತೇನೆ. ನಾವು ಹೇಳಿದ್ದಕ್ಕೂ ಇವರು ಹೇಳುವುದಕ್ಕೂ ಏನೂ ವ್ಯತ್ಯಾಸ ಇಲ್ಲ. ತಾವು 18ನೇ ತಾರೀಖು ಇದನ್ನು ಹೇಳಿದ್ದೀರಿ. ಬಜೆಟ್ ಮೇಲೆ ಸಾಮಾನ್ಯವಾದ ಚರ್ಚೆ ಯಾವಾಗ ಪ್ರಾರಂಭ ಆಯಿತು?

ಶ್ರೀ ಎಂ. ವೀರಪ್ಪ ಮೊಯಿಲಿ : ಅವತ್ತೇ ಪ್ರಾರಂಭ ಆಯಿತು.

Of Course, the Opposition walked out. ಆಗ ಮೇಲೆ ಚರ್ಚೆ ಪ್ರಾರಂಭ ಆಗಿದೆ....

ಶ್ರೀ ಹೆಚ್. ಏಕಾಂತಯ್ಯ : ಇವತ್ತು ಸಹ ನಮ್ಮ ತಕರಾರು ಏನೂ ಇಲ್ಲ. ಇವತ್ತು ಇದು ಸರಿ ಇದೆ ಎಂದು ನಿಮಗೆ ಅನ್ನಿಸಿದರೆ ನನ್ನದು ಏನೂ ತಕರಾರು ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ: ಸರಿ ಪ್ರಶ್ನೆ ಅಲ್ಲ. ಅನುಕೂಲ...

ಶ್ರೀ ಹೆಚ್. ಏಕಾಂತಯ್ಯ: 128 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣ ಇವತ್ತಿನ ದಿವಸ ಪೂರಕ ಅಂದಾಜುಗಳ ರೂಪದಲ್ಲಿ ಈ ಸಭೆಯಲ್ಲಿ ತಾವು ಒಪ್ಪಿಗೆ ಪಡೆದಿದ್ದೀರಿ. ನನ್ನ ಆಸೆ ಏನು ಇತ್ತು ಎಂದರೆ ಇದರ ಬಗ್ಗೆ ಸಹ ಸಾಮಾನ್ಯವಾದ ಚರ್ಚೆ ಮಾಡಬೇಕಾಗಿತ್ತು ಎಂದು. 1990-91ರ ಅಪ್ರೊಪ್ರಿಯೇಷನ್ ಬಗ್ಗೆ ಆದರೆ ಐ ಕೆನ್ ಅಂಡರ್‌ಸ್ಟ್ಯಾಂಡ್. 1990-91ಕ್ಕೆ ಏನು ಪೂರಕ ಅಂದಾಜು ಇವೆ. ಅದರ ಬಗ್ಗೆ ಚರ್ಚೆ ಇಲ್ಲದೆ ತಾವು ಒಪ್ಪಿಗೆ ಪಡೆಯಬೇಕೆಂದು ತಾವು ಪ್ರಯತ್ನ ಮಾಡಿದರೆ ಇದು ಸರಿಯಲ್ಲ ಎಂಬ ಮಾತನ್ನು ಇವತ್ತು ಹೇಳುತ್ತೇನೆ, ಇನ್ನು ಮುಂದೆಯೂ ಸಹ ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ: ತಮ್ಮ ಕೊನೆಯ ವಾಕ್ಯ ಏನು ಹೇಳಿದ್ದೀರಿ, ಅದಕ್ಕೆ ನನ್ನ ಸಹಮತಿ ಇದೆ. ಆದರೆ ಪರಿಸ್ಥಿತಿ ಈ ರೀತಿ ಇದೆ. ಅಯವ್ಯಯ ಮತ್ತು ಅನುಪೂರಕ ಅಂದಾಜು ಬಗ್ಗೆ ಚರ್ಚೆ ಜೊತೆ ಜೊತೆಯಲ್ಲಿಯೇ ಆಗಬೇಕೆಂದು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಏನು ವಿಧಾನ ಇತ್ತು, ಅದನ್ನು ನಾವು ಮತ್ತೊಂದು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಬದಲಾವಣೆ ಮಾಡಬಹುದಿತ್ತಲ್ಲ. ಸಪ್ಲಿಮೆಂಟರಿ ಬಜೆಟ್ ಮೇಲೆ ಸಪರೇಟಾಗಿ ಚರ್ಚೆ ಆಗಬೇಕು ಎಂದು ತಾವು ಸೂಚನೆ ಕೊಟ್ಟಿದ್ದರೆ ನಾವು ಖಂಡಿತವಾಗಿಯೂ ಒಪ್ಪಿಕೊಳ್ಳುತ್ತಿದ್ದೆವು. ಎರಡನೆಯದು ಏನು ಆಯಿತು? ಯಾವುದು ಮೊದಲನೆಯ ವ್ಯವಸ್ಥೆಗೆ ತಾವು ಒಪ್ಪಿಕೊಂಡಿದ್ದೀರಿ, ಬದಲಾವಣೆ ಮಾಡಬೇಕಾದಂತಹ ಸೂಚನೆ ತಮ್ಮಿಂದ ಬರುತ್ತಾ ಇದ್ದರೆ ಒಳ್ಳೆಯದಿತ್ತು. ಆದರೆ ಈಗ ಎಲ್ಲಾ ಆದ ಮೇಲೆ ಚರ್ಚೆ ಪ್ರಾರಂಭ ಆದ ಮೇಲೆ ಆಗಲೂ ಕೂಡ ತಾವು ಸೂಚನೆಯನ್ನು ಎತ್ತಿದ್ದರೆ ನಾವು ಸರ್ಕಾರದವರು ಬಹುಶಃ ಒಪ್ಪಿಕೊಳ್ಳುತ್ತಿದ್ದೆವು. ಅದು ಎರಡೂ ಆಗಲಿಲ್ಲ. ನಾನು ಒಪ್ಪುತ್ತೇನೆ. ಯಾವುದರಲ್ಲಿಯೂ ಆದರೂ ಚರ್ಚೆ ಆಗದೇ ಮಂಜೂರು ಆಗುವುದು ನಮಗೂ ವಿಹಿತ ಅಲ್ಲ. ಚರ್ಚೆ ಆಗಬೇಕಾಗುತ್ತದೆ. ಆದರೆ ಪಾಸ್ ಆಗಿದೆ. ಮಂಜೂರಾಗಿದೆ. ಇವತ್ತು ಬೆಳಿಗ್ಗೆ ಏನು ಆಯಿತು? ಎಲ್ಲಾ ಆದ ಮೇಲೆ ಅಂದರೆ ಪಾಸ್ ಆದ ಮೇಲೆ ತಾವು ಆಕ್ಷೇಪಣೆ ಎತ್ತಿದ್ದೀರಿ, ಚರ್ಚೆಗೆ ಅವಕಾಶ ಇರಲಿಲ್ಲ ಅಷ್ಟೇ.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ: ಸಂಖ್ಯಾಬಲ ಇದೆ, ತೀರ್ಮಾನ ಆಗಿದೆ, ನಮ್ಮದು ತಕರಾರು ಇಲ್ಲ. ತಮ್ಮಲ್ಲಿ ಸಂಖ್ಯಾಬಲ ಇದೆ, ಒಪ್ಪಿಗೆ ಪಡೆದಿದ್ದೀರಿ.

(ಗೊಂದಲ)

ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ)

ವಿಧೇಯಕ, 1991

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಎಂ. ವೀರಪ್ಪ ಮೊಯಿಲಿ: ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು: ಮಾನ್ಯ ಉಪಾಧ್ಯಕ್ಷರೆಯವರೇ, ಮಾನ್ಯ ಸಾರಿಗೆ ಮತ್ತು